ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2021

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿ ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444
ಸಂಪುಟ-21 ಸಂಚಿಕೆ-8 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ಮಂಟಪದಲ್ಲಿ ನಾಗರಪಂಚಮಿ

ತಾ.13–08–2021ರಂದು ಈ ವರ್ಷದ ಮೊದಲ ಹಬ್ಬ ನಾಗರಪಂಚಮಿ. ದೇಶದಾದ್ಯಂತ ಕೊರೊನಾ ಭೀತಿ ಆವರಿಸಿದುದರಿಂದ ನಾಗದೇವರ ಕೃಪೆ ಈ ಸಂದರ್ಭದಲ್ಲಿ ದೇಶವಾಸಿಗಳಿಗೆ ವಿಶೇಷವಾಗಿ ಅಗತ್ಯವಾಗಿದೆ. ಅಂತೆಯೇ ನೀತಿಸಂಹಿತೆಯ ಪ್ರಯುಕ್ತ ಸರಳವಾಗಿ ಯಾದರೂ ಸಂಪೂರ್ಣ ಭಕ್ತಿಭಾವದಿಂದ ಆಚರಿಸಲಾಯಿತು. ಹಿಂದಿನ ದಿನವೇ ನಾಗದೇವರ ಗುಡಿ ಹಾಗೂ ಸುತ್ತಲಿನ ವಠಾರವನ್ನು ಸ್ವಚ್ಛಗೊಳಿಸಲಾಗಿತ್ತು. ನಾಗದೇವರ ಗುಡಿಯನ್ನು ಪುಷ್ಪಾಲಂಕಾರದಿಂದ ಅಲಂಕೃತಗೊಳಿಸಲಾಗಿತ್ತು. ನಾಗದೇವರ ಶಿಲಾವಿಗ್ರಹಕ್ಕೆ ಕ್ಷೀರ, ಪಂಚಾಮೃತ, ನಾರಿಕೇಳದಿಂದ ಅಭಿಷೇಕ



ಮಾಡಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ ಹೆಬ್ಬಾರ್‌ರವರು ಸಮಾಜಬಾಂಧವರ ಪರವಾಗಿ ಸಮಾಜದ ಶ್ರೇಯೋಭಿವೃದ್ಧಿಗಾಗಿ ಹಾಗೂ ಸದ್ಯದ ಸಂಕಷ್ಟದಿಂದ ದೇಶವನ್ನು ಕಾಪಾಡುವಂತೆ ಪ್ರಾರ್ಥನೆ ಸಲ್ಲಿಸಿದರು. ಪದಾಧಿಕಾರಿಗಳಾದ ಶ್ರೀ ಪ್ರಭಾಕರ ಭಂಡಿ ಹಾಗೂ ಇತರ ಸಮಾಜ ಬಾಂಧವರು ಉಪಸ್ಥಿತರಿದ್ದರು. ಶ್ರೀ ಶಾರದಾ ಮಂಟಪದ ಆಸುಪಾಸಿನ ಭಕ್ತರು ಹಾಗೂ ಸಮಾಜ ಬಾಂಧವರು ಸರತಿಯಾಗಿ ಆಗಮಿಸಿ ನಾಗದೇವರಿಗೆ ತನು ಅರ್ಪಿಸಿದರು. ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಪೂಜೆ ನೆರವೇರಿತು. ದೇವಸ್ಥಾನದಲ್ಲಿ ಅಂದು ಸಂಜೆ ವಿಶೇಷ ಭಜನಾ ಸೇವೆ ನೆರವೇರಿತು.

## ಪಡುಬಿದ್ರಿ ದೇವಳಕ್ಕೆ ಪ್ರವೇಶ ದ್ವಾರ



ತಾರೀಕು 16.08.2021ನೇ ಸೋಮವಾರ ಬೆಳಿಗ್ಗೆ 11.00ಕ್ಕೆ ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದ ನೂತನವಾಗಿ ನಿರ್ಮಾಣವಾಗಿರುವ ಕಾರ್ಕಳ ರಾಜ್ಯ ಹೆದ್ದಾರಿ ಪಕ್ಕದಲ್ಲಿರುವ ದ್ವಾರದ ಉದ್ಘಾಟನಾ ಕಾರ್ಯಕ್ರಮವನ್ನು ಕಾಪು ಕ್ಷೇತ್ರದ ಶಾಸಕರಾದ ಶ್ರೀ ಲಾಲಾಜಿ ಆರ್.ಮೆಂಡನ್‌ರವರು ನೆರವೇರಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಕ್ಷೇತ್ರದ ತಂತ್ರಿಯುವರಾದ ಶ್ರೀ ವಾಗೀಶ ಶಾಸ್ತ್ರಿಯವರು ಉಪಸ್ಥಿತರಿರುವರು. ದ್ವಾರದ ನಿರ್ಮಾಣ ಮತ್ತು ಕೊಡುಗೆ ನೀಡಿದ ಶ್ರೀ ಶಾರದಾ ಕನ್‌ಸ್ಟ್ರಕ್ಷನ್ ಮಾಲಕರಾದ ಶ್ರೀ ಶೇಖರ್ ಶೆಟ್ಟಿ ಪಾದೆಬೆಟ್ಟು ಇವರಿಗೆ ದೇವಸ್ಥಾನದ ಆಡಳಿತ ಮಂಡಳಿಯು ಧನ್ಯವಾದವನ್ನು ತಿಳಿಸುತ್ತದೆ.

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.

ಆತ್ಮೀಯ ಸಮಾಜ ಬಾಂಧವರೇ,

ಸಂಘದ ವತಿಯಿಂದ ನಡೆಯಲಿರುವ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

**ಶೃಂಗೇರಿಯಲ್ಲಿ ಗುರುಗಳ ಭೇಟಿ**

ಈ ವರ್ಷ ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಅವಕಾಶವಿದ್ದು ಸಣ್ಣ ತಂಡಗಳಾಗಿ ಶೃಂಗೇರಿಗೆ ತೆರಳಿ, ಉಭಯ ಜಗದ್ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆದು ಬರುವಂತೆ ಸಮಾಜ ಬಾಂಧವರನ್ನು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೆನೇಜರ್ ಶ್ರೀ ಅಜಿತ್‌ರಾವ್ (9448108920, 0820-2520754) ಅಥವಾ ಸಹಾಯಕ ಮೆನೇಜರ್ ಶ್ರೀ ನಾಗಭೂಷಣ್ (9964069306)ರವರಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.

**ವರಮಹಾಲಕ್ಷ್ಮೀವ್ರತ ಹಾಗೂ ಹೂವಿನ ಪೂಜೆ**
(ಮಹಿಳಾ ವೇದಿಕೆಯ ವತಿಯಿಂದ)
ತಾ.20-08-2021ನೇ ಶುಕ್ರವಾರ ಸಮಯ : ಸಂಜೆ 5-00 ಗಂಟೆಗೆ

**ಋಗುಪಾಕರ್ಮ**
ತಾ.22-08-2021ನೇ ಆದಿತ್ಯವಾರ ಸಮಯ : ಬೆಳಿಗ್ಗೆ 10-00ರಿಂದ

ಕಾರ್ಯದರ್ಶಿ ಕೋಶಾಧಿಕಾರಿ ಅಧ್ಯಕ್ಷರು
ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

### ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


# ಆಟಿಯ ಆಟ–ಕೂಟ–ಊಟ

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.

**ಆಟಿ ಅಮಾಸ್ಯೆ :** ಆಷಾಢ ಮಾಸದ ಅಮಾವಾಸ್ಯೆಯನ್ನು ಗ್ರಾಮ್ಯವಾಗಿ ಆಟಿ ಅಮಾಸ್ಯೆ ಎಂದು ಕರೆಯುವುದು ರೂಢಿ. ಈ ವರ್ಷ ಆಗೋಸ್ಟ್ 8 ರಂದು ಆಟಿ ಅಮಾಸ್ಯೆ. ಈ



ದಿನ ಮುಂಜಾನೆ ಹಾಲೆಮರದ ಕೆತ್ತೆ (ಸಪ್ತವರ್ಣ)ಯ ಕಷಾಯವನ್ನು ಕುಡಿಯುವುದು ಕರಾವಳಿಯಲ್ಲಿ ಬೆಳೆದು ಬಂದ ಒಂದು ಸಂಪ್ರದಾಯ. ಪರಿಸರ ಶುದ್ಧವಿರುವ ಪ್ರದೇಶದಲ್ಲಿರುವ ಹಾಲೆಮರದ ಕೆತ್ತೆಯನ್ನು ಕಷಾಯ ತಯಾರಿಸಲು ಆಯ್ದುಕೊಳ್ಳಬೇಕು. ಇದು ಉಷ್ಣ ಪ್ರಕೃತಿ ಔಷಧ. ಹಾಲೆಮರದ ಕೆತ್ತೆಯ ಕಷಾಯವನ್ನು ಕೇವಲ 20 ರಿಂದ 30 ಮಿ. ಲೀಟರ್ ಪ್ರಮಾಣದಲ್ಲಿ ಸೇವಿಸಬೇಕು. ಕಷಾಯ ಸೇವನೆ ಪ್ರಮಾಣ ಕಡಿಮೆ ಇದ್ದರೂ ಉಚ್ಚ ಮಟ್ಟದ ಔಷಧೀಯ ಗುಣ ಇರುತ್ತದೆ. ಪಾಲೆಯ ಕೆತ್ತೆಯಲ್ಲಿ ಆಟಿಯ ಅಮವಾಸ್ಯೆಯ ದಿನ ಸಾವಿರದೊಂದು ಬಗೆಯ ಔಷಧಿಗಳು ಸೇರಿಕೊಂಡಿರುವುದರಿಂದ ಎಲ್ಲಾ ಕಾಯಿಲೆಗಳಿಗೂ ಸಿದ್ಧೌಷಧವಾಗುವುದು.



ಮನೆಯಲ್ಲೇ ಕಷಾಯ ಮಾಡಿ ಕುಡಿಯಬಹುದು. ಈಗಂತೂ ಕೊರೊನಾ ಸೋಂಕಿನ ಕಾರಣ ಕಷಾಯದ ಸಾಮಾಜಿಕ ವಿತರಣೆ ಕಷ್ಟ. ಸಪ್ತವರ್ಣದ ಕಷಾಯ ಕೊರೊನಾಕ್ಕೆ ಹೇಳಿ ಮಾಡಿಸಿದಂತಿದೆ. ಯಾವುದೇ ಜ್ವರಕ್ಕೆ ಅನ್ವಯವಾಗುವ ಕಷಾಯ ಮತ್ತು ಯಾವುದೇ ಕಹಿಯಾದ ಮದ್ದು ಕೊರೊನಾ ವೈರಾಣುವಿಗೂ ಅನ್ವಯವಾಗುತ್ತದೆ. ಕಹಿ ಮದ್ದು ದೇಹದ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಹಾಲೆ ಮರದ ಕಷಾಯವೂ ಕಹಿ ಗುಣಧರ್ಮದ್ದಾದ ಕಾರಣ ಕೊರೊನಾಕ್ಕೆ ಸೂಕ್ತ ಎಂಬುದು ಹಲವರ ಅಭಿಮತ. ಮಕ್ಕಳು ಇದನ್ನು ಸ್ವೀಕರಿಸಲು ಹಿಂದೇಟು ಹಾಕುತ್ತಾರೆ. ಆಗ ತಾಯಂದಿರು ಒಂದಿಷ್ಟು ಸಿಹಿಯನ್ನು ಬಾಯಿಗೆ ಹಾಕಿ ಕಷಾಯವನ್ನು ಕುಡಿಸುವುದುಂಟು. ಹಾಲೆ ಮರದ ಒಂದೆರಡು ಕೆತ್ತೆಗಳನ್ನು ದೇವರ ಕೋಣೆಯಲ್ಲಿ ದೇವರ ಸನಿಹ ಇಟ್ಟು ಕಷಾಯ ಕುಡಿದರೆ ಮುಕ್ಕೋಟಿ ದೇವತೆಗಳು ಸಂತುಷ್ಟರಾಗಿ ಅನುಗ್ರಹಿಸುವರೆಂದು ತಿಳಿಯುತ್ತಾರೆ. ಆದರೆ ಆಟಿ ಅಮವಾಸ್ಯೆಯ ದಿನ ನೆನಪಿಸಿಕೊಂಡು ಮತ್ತೆ ಮರೆತುಬಿಡುತ್ತಾರೆ.

**ಆಟಿಕಳೆಂಜೆ :** ಮರೆಯಲಾಗದ ಮಳೆಗಾಲ. ಮಳೆಯು ಮುಸಲಧಾರೆ. ಆಟಿ ತಿಂಗಳಲ್ಲಿ ದೈವಗಳು ಘಟ್ಟಕ್ಕೆ ಹೋಗುತ್ತವೆ. ಕೋಲ, ನೇಮ, ತಂಬಿಲಗಳು ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಆಟಿ ಕಳೆಂಜೆ ದೈವದ ರೂಪದಲ್ಲಿ ಮನೆ ಮನೆಗೆ ಬಂದು ಮಾರಿ ಓಡಿಸಿ ರೋಗಗಳನ್ನು ನಿವಾರಣೆ ಮಾಡುತ್ತಾನೆ ಎಂಬುದು ತುಳುವರ ನಂಬಿಕೆ.

ಆಟಿ ತಿಂಗೊಳ್ದು ಕಳೆಯಿನ ವೇಸೊ ಪಾಡೊಂದು ನಲಿಕೆದಕುಲು ಇಲ್ಲ ಇಲ್ಲಡೆ ನಲಿತೊಂದು ಪೋಪೆರ್. ಕಾರ್‌ಗ್ ಎಲ್ಯ ಗಗ್ಗರೋ, ಸೊಂಟೊಗು ಕೆಂಪು ಬೊಳ್ದು ಪಟ್ಟಿದ ಲಂಗೋ, ಅಯಿತ ಮಿತ್ತ್ ತಾರೆದ ಸಿರಿಟ್ ಮಲ್ತಿಂಚಿ ಜಾಲರಿದಂಚಿನ ಅಲಂಕಾರೋ. ತರೆಕ್ಕ್ ಪಾಲೆದ ಮುಟ್ಟಾಲೆ, ಮುಟ್ಟಾಲೆಗ್ ಎದ್ರುಡ್ದ್ ಸಿರಿತ ಜಡೆ ಪಟ್ಟಿ ಅತ್ತಂಡ ಕಂಚಿದ ಕೇದಗೆ ಮುಂದಲೆ. ಮೋನೆಗ್ ಅರ್ದಾಲೊ ಕೆಂಪುಕಪ್ಪುದ ಪುಲ್ಲಿ, ಮೈಕ್ ಅಂಗಿ, ಅಯಿತ ಮಿತ್ತ್ ಸಿರಿತ ಸರೊಮಾಲೆ. ಕೈಕ್ ಸಿರಿತ್ತನೇ ಕೈಕಟ್ಟ್ ತೋಳ ಬಂದಿ–ಉಂದು ಆಟಿಕಳೆಂಜನ ವೇಸೊ. ಆಟಿಕಳೆಂಜಿನೊಟ್ಟುಗು ಪೊಂಜೊವು ಅತ್ತ್ಂಡ ಆಂಜೊವು ತೆಂಬರೆ ಬೊಟ್ಟುದು ಪದ



ಪಣ್ಪೆರ್. ಆಟಿಕಳೆಂಜೆ ಕೈಟ್ ಪಣೆತ್ತ ತತ್ರೊ ಪತ್ತೊಂದು ಕುಡ ಒಂಜಿ ಕೈಟ್ ಸೊಂಟೊಗು ಕಟ್ಟಿನ ತಾರೆದ ಸಿರಿನ್ ರಾಪವೊಂದು ದುಂಬು ಪಿರವು ಪೋದ್ ತಾಳೊಗು ಸರಿಯಾದ್ ನಲಿಪುವೆ.



ಆಟಿಕಳೆಂಜೆ ಆಟಿದ ತಿಂಗೊಳುಡ್ದ್ ಇಲ್ಲ ಇಲ್ಲಡೆಗೆ ಪೋದ್ ಮಾರಿ ಕಳೆಪ್ಪೆ. ಮೂಡಾಯಿದ ಮಾರಿನ್ ಮೂಡಾಯಿಗ್ ಸಾಗಬೆ. ಪಡ್ದೊಯಿದ ಮಾರಿನ್ ಪಡ್ದೊಯಿಗ್ ಸಾಗಬೆ. ನರಮಾನ್ಯಗ್ ಪ್ರಾಣಿಲೆಗ್ ಬರ್ಪಿ ಕಾಯಿಲೆನ್ ನಿವಾರಣೆ ಮಲ್ಪುವೆ. ಬಡಪತ್ತ್ ದೂರೊ ಮಲ್ಪುವೆ. ಅಂಚಿನ ಮಂತ್ರವಾದಿ ಆಟಿಕಳೆಂಜೆ. ಒಂಜಿ ಪದ ಇಂಚ ಉಂಡು:


*ಆಟಿಡ್ ಬತ್ತೆ ಕಳೆಂಜೆ ಮಾರಿ ಕಳೆಪೆನೋ*
*ಮೂಡೈ ಮಾರಿನ್ ಮೂಡಾಯಿಗ್ ಕೊಂಡೊಪೆನೊ*
*ಆಟಿಡ್ ಮುಪ್ಪೊ ದಿನ ಮಾಮಿ ಬುಡಾರೊ*
*ಬಾರೆದ ಕಂಡೆ ತಿಂದೆ ಕಳೆಂಜೆ ಬಂಜಿ ಬಳತ್ತ್ಂಡೇ*
*ಮೂಂಡಿದೆ ಕಂಡೆ ತಿಂದೆ ಕಳೆಂಜೆ ದೊಂಡೆ ಮೂರೊಂಡೇ*
*ಕಳೆಂಜೆ ಕಣ್ಣ್‌ಡ್ ತೂಪೆನೋ ಅಡ್ಡ ಬಳತ್ತೆನೋ*
*ಮೂಡಾಯಿ ಪೋಪೆನೋ ಕಳೆಂಜೆ ಮಾರಿ ಕಳೆಪ್ಪೆನೋ*
*ಮೂವೊಡುತ ಸಾಂತಾಣಿ ನಟ್ಯೇನೋ ಕಳಂಜೆ*
*ಈವೊಡುತ ಪೆಲತ್ತರಿ ನಟ್ಯೇನೋ*
*ಬಾಕಿಲ್ ಬಾಕಿಲ್ ಪೋಪೆನೋ ಕಳೆಂಜೆ*
*ಸೋಣೊಡು ಪೋಪೆನೋ.*
*ಡೆನೆನ ಡೆನನಾ, ಡೆನನಾ ಡೆನನಾ .......*
*ಆಟಿ ಕಳೆಂಜೆ ಬರೊಂದುಲ್ಲೆ......*

ನಲಿಕೆ ನರಮಾನಿ, ಪ್ರಾಣಿ, ಪಕ್ಕಿಲೆನ ಒಂಜಿ ಸಹಜ ಕ್ರಿಯೆ. ನರಮಾನಿ ಸಂತೋಸೊನು ತೆಲಿಕೆಡ್ ತೋಜವೆ. ತೆಲಿಕೆ ಮಿತಿಮೀರ್ನಗ ಅವು ನಲಿಕೆಗ್ ಸಾದಿ ಆಪುಂಡು. ತೆಲಿಕೆ, ನಲಿಕೆ ನಮ್ಮ ಉಡ್‌ಲಗ್ ತೃಪ್ತಿ ಕೊರ್ಪುಂಡು. ಉಲ್ಲಾಸೊ ಕನಪುಂಡು. ನಲಿಕೆಗ್ ಬೊಟ್ಟುನ, ಉರಿಪುನ ಪದ ಪನ್ಪುನ ಹಿಮ್ಮೇಳೊ ಸೇರುಂಡ್. ನಲಿಕೆ ಪೊರ್ಲು ತೋಜ್ಯರೆ ಬಣ್ಣಗಾರಿಕೆ ಸುರುವಾಂಡ್.

ಕೃಪೆ: ತುಳುನಾಡ್‌ದ ಜನಪದ ನಲಿಕೆಲು – ಪಾಲ್ತಾಡಿ ರಾಮಕೃಷ್ಣ ಆಚಾರ್.

ಈ ಮಾಹಿತಿ ನೀಡಿದವರು ನಂದಳಿಕೆ ಬಾಲಚಂದ್ರ ರಾವ್.

**ಚೆನ್ನಮಣೆ ಆಟ :** ಜಾನಪದ ಜೀವನದಲ್ಲಿ ಚೆನ್ನಮಣೆಗೆ ಮನ್ನಣೆ ಇದೆ. ಹಳೆಯ ಕಾಲದ ಸಂಪ್ರದಾಯದ ಆಟ ಚೆನ್ನಮಣೆ ಆಟ.









ಹಲಸು ಮತ್ತು ಸಾಗುವಾನಿ ಮರದಿಂದ ತಯಾರಿಸಿದ ಎರಡು ಸಾಲಿನ ಏಳೇಳು ಗುಳಿಗಳಿರುವ ಚೆನ್ನಮಣೆಯನ್ನು ಆಟಕ್ಕೆ ಉಪಯೋಗಿಸುತ್ತಾರೆ. ಇಕ್ಕೆಲದಲ್ಲಿ ಚೆನ್ನೆಕಾಯಿ ಶೇಖರಿಸಿಡಲು ವ್ಯವಸ್ಥೆ ಇದೆ. ಇಬ್ಬರು ಆಟವಾಡಲು ಆಗುತ್ತದೆ. ಮಂಜೊಟ್ಟಿ ಕಾಯಿಗಳಿಂದ ಚೆನ್ನಮಣೆಯ ಗುಳಿಗಳನ್ನು ಭರ್ತಿ ಮಾಡಬೇಕು. ಎಲ್ಲಾ ಕಾಯಿಗಳು ಯಾರ ವಶವಾಗುತ್ತವೋ ಅವರು ಗೆಲುವನ್ನು ಸಾಧಿಸುತ್ತಾರೆ. ತುಳುನಾಡಿನಲ್ಲಿ ಚೆನ್ನೆಮಣೆಯನ್ನು ಅಕ್ಕತಂಗಿಯರು ಜೊತೆಯಲ್ಲಿ ಆಡುವುದಿಲ್ಲ.



ತುಳುನಾಡ ಸಿರಿ ಪಾರ್ದನದಲ್ಲಿ ತೋರಿಬಂದ ಒಂದು ಘಟನೆಯಲ್ಲಿ ಸ್ವಾರಸ್ಯಕರ ಹಿನ್ನೆಲೆ ಇದೆ.

ಮಂಜಿಲೊಂಟು ಬ್ರಹ್ಮ ಬ್ರಾಹ್ಮಣ ವೇಷದಲ್ಲಿ ಎದುರಾಗಿ ಹರಕೆಯ ವಿಚಾರ ನೆನಪಿಸಿದರೂ ಸೊನ್ನೆ ಮಾರ್ಲರು ತ್ವರೆಯಾಗಿ ಮದುವೆ ಕರೆ ಮುಗಿಸಲು ಮುಂದುವರೆದರು. (ಹಿಂದೆ ಜೋಡು ಹುಲಿಗಳಾಗಿ ಮಗುವನ್ನು ತಮಗೆ ಒಪ್ಪಿಸಬೇಕೆಂಬ ಮಾತಿಗೆ ಬದ್ಧರಾದವರು ಸೊನ್ನೆ ಮಾರ್ಲರು.) ಆದ್ದರಿಂದ ಬ್ರಾಹ್ಮಣರು ಅಬ್ಬಗದಾರಗರನ್ನು ಚೆನ್ನೆಮಣೆ ಆಟವಾಡಲು ಪ್ರೇರೇಪಿಸಿದರು. ಅವರು ಚಿನ್ನದ ಚೆನ್ನೆಮಣೆ ಮತ್ತು ಬೆಳ್ಳಿಯ ಕಾಯಿಗಳನ್ನು ಚಾವಡಿಗೆ ತಂದಿಟ್ಟರು. ಬಾಜಿರದ ಹಲಗೆಯ ಮೇಲೆ ಎದುರು ಬದುರಾಗಿ ಕುಳಿತರು. ಮಣೆಯನ್ನು ಮುಂದಿಟ್ಟು ಎರಡು ಸಾಲಿನ ಏಳೇಳು ಗುಳಿಗಳಲ್ಲಿ ಕಾಯಿ ಹರಡಿದರು. ಮೊದಲಾಟ ಮೊದಲಾಯಿತು. ಮಂದಗತಿಯಿಂದ ಮುಂದರಿದು ಮುಗಿಯಿತು. ದಾರಗ ಅಕ್ಕನನ್ನು ಸೋಲಿಸಿ 'ಪೂರಿ' ಮಾಡಿದಳು. 'ತಂಗಿ ಕೈಯಿಂದ ಅಕ್ಕ ಪೂರಿ ತಿನ್ನುವುದೇ? ಇನ್ನೊಂದು ಆಟ ಆಡಿ. ಅದರಲ್ಲಾದರೂ ಅಬ್ಬಗ ಗೆಲ್ಲಬೇಕು.' ಎಂದು ಬ್ರಾಹ್ಮಣರು ಹುರಿದುಂಬಿಸಿದರು. ಚೆಲುವ ಚೆನ್ನೆಯರು ಚದುರೆಯರು ಅಮಿತೋತ್ಸಾಹಿತರಾಗಿ ಎರಡನೆಯ ಆಟ ಆರಂಭಿಸಿದರು. ದಾರಗಳ ತುಟಿಯಲ್ಲಿ ಗೆಲುವಿನ ನಲುಮೆಯ ನಸುನಗೆ ನರ್ತಿಸಿತು. ಅಕ್ಕನನ್ನು ಸೋಲಿಸಿ ಇನ್ನೊಂದು ಪೂರಿ ಮಾಡಿದಳು. ಅಬ್ಬಗಳ ಮನ ನೊಂದಿತು. ಮುಖ ಕಂದಿತು. ಮೂರನೆಯ ಆಟವನ್ನು ಗೆಲ್ಲಬೇಕೆಂಬ ಛಲ ಬಲವಾಯಿತು. ನಾಗೆಲ್ಲುವೆ ನಾಗೆಲ್ಲುವೆ ಎಂದು ಛೇಡಿಸುವಂತೆ ಬಾರಿ ಬಾರಿಗೂ ಒಬ್ಬರೊಬ್ಬರ ಮುಖ ನೋಡಿ ನೋಡಿ ಆಡತೊಡಗಿದರು. ಬ್ರಾಹ್ಮಣರು ನೆಟ್ಟ ದೃಷ್ಟಿಯಿಂದ ನಿಟ್ಟಿಸುತ್ತ ಕುಳಿತರು. ಆಟ ಮುಗಿಯಿತು. ದಾರಗ ಮೂರನೆಯ ಬಾರಿಯೂ ಅಕ್ಕನನ್ನು ಸೋಲಿಸಿ ಮತ್ತೊಂದು ಪೂರಿ ಮಾಡಿದಳು. ದಾರಗ ಹಂಗಿಸಿ ಚಾಳಿಸಿದಳು. ಸಿಟ್ಟಿನ ಕಿಡಿ ಸಿಡಿದು ಅಬ್ಬಗ ಕಿಡಿಕಿಡಿಯಾದಳು. ಕಣ್ಣು ಕೆಂಪಡರಿತು. ಹಲ್ಲು ಕಟಕಟ ಕಡಿದಳು. ಚೆನ್ನೆಮಣೆಯನ್ನೆತ್ತಿ ಬೀಸಿ ಹೊಡೆದಳು. ಚೆನ್ನೆಯ ಕಾಯಿ ಚಾವಡಿಯಲ್ಲಿ ಚದುರಿತು. ಬಲವಾಗಿ ಬಿದ್ದ ದಾರಗಳ ನೆತ್ತಿ ಒಡೆಯಿತು. ರಕ್ತ ಚಿಮ್ಮಿತು. ಥಟ್ಟನೆ ಬಲ ತಪ್ಪಿ ಧೊಪ್ಪನೆ ನೆಲಕ್ಕೆ ಬಿದ್ದಳು.

ಆಧಾರ : ತುಳುನಾಡ ಸಿರಿ, ಕಾದಂಬರಿ – ಎನ್.ವಿ.ರಾವ್

**ಕೂಟ–ಊಟ :** ಚೆನ್ನೆಮಣೆ, ಪಗಡೆ, ಕವಡೆ, ಚೌಕಭಾರ, ಪೊಕ್ಕು ಆಟ (ಕಲ್ಲಾಟ), ಹಾವು–ಏಣಿ ಆಟ, ಲಗೋರಿ ಆಟ, ಹುಲಿದನ ಆಟ, ಉಯ್ಯಾಲೆ ಆಟ, ಕುಟ್ಟಿದೊಣ್ಣೆ ಆಟ ಮೊದಲಾದುವು. ಹಳೆ ಕಾಲದ ಆಟಗಳು. ಈಗ ಕೂಟದೊಂದಿಗೆ ಚೆಸ್, ಕೇರಂ, ಬಾಲ್ ಬ್ಯಾಡ್‌ಮಿಂಟನ್, ವಾಲಿಬಾಲ್. ಕ್ರಿಕೆಟ್ ಮೊದಲಾದ ಆಟಗಳಿವೆ. ಜನಪದ ಹಾಡುಗಳನ್ನು ಹಾಡುವುದೂ ಇದೆ. ಕೆಸರಗದ್ದೆ ಆಟಗಳೂ ಇವೆ.

ಅಡಿಗೆಯಾಯಿತಾ, ಏನು ಪದಾರ್ಥ ಎಂದು ಕೆಲವರು ಮಾತನಾಡಿಕೊಳ್ಳುತ್ತಾರೆ. ಹುಡುಗಿಗೆ ಅಡುಗೆ ಮಾಡಲು ಬರುತ್ತದಾ ಎಂದು ಮದುವೆ ಸಂದರ್ಭದಲ್ಲಿ ಕೆಲವರು ಕೇಳುವುದುಂಟು. ಮದುವೆ ಆದ ಮೇಲೆ ಕೆಲವು ಹುಡುಗಿಯರು ಅಡುಗೆಗೆ 'ಕ್ಲಾಸ್' ಗೆ ಹೋಗುವುದುಂಟು. ಇನ್ನು





ಹಳೆಯ ಕಾಲದ ಅಡುಗೆ ಸಾಮಾಗ್ರಿಗಳನ್ನು ನೋಡಿದಾಗ ಅವು ಪ್ರದರ್ಶನಕ್ಕೆ ಮಾತ್ರ ಈಗ. ಅತ್ಯಾಧುನಿಕ ಅಡುಗೆ ಸಾಮಾಗ್ರಿಗಳು ಇಂದು ದೊಡ್ಡ ದೊಡ್ಡ ಮಾಲ್‌ಗಳಲ್ಲಿ ದೊರಕುತ್ತವೆ. ಹಳೆ ಕಾಲದ ಕೆಲವು ಆಹಾರ ತಿಂಡಿಗಳನ್ನು ಈಗ ನೋಡುವ. ಪತ್ರೋಡೆ, ಪತ್ರೋಡೆಯ ಒಗ್ಗರಣೆ, ಅರಸಿನ ಎಲೆಯ ಗಟ್ಟಿ, ಪುಂಡಿ ಗಟ್ಟಿ, ಹಾಲುಬಾಯಿ, ಹಲಸಿನ ಹಣ್ಣಿನ ಗಟ್ಟಿ, ಕೊಟ್ಟಿಗೆ (ಗುಂಡ), ಮೂಡೆ, ಅಪ್ಪ, ನೈಅಪ್ಪ, ಸ್ಯಾವಿಗೆ, ಚಿತ್ರಾನ್ನ, ಹಲಸಿನ ಹಣ್ಣಿನ ಪಾಯಸ, ಕುಚ್ಚಲಕ್ಕಿ ಗಂಜಿ, ನೀರಿನ ಮಾವಿನಕಾಯಿ ಚಟ್ನಿ, ಸೊಜಂಕ್ ಸೊಪ್ಪಿನ ಪಲ್ಯ, ಉಪ್ಪಡಚ್ಚೀರಿನ ಪಲ್ಯ, ಹಲಸಿನ ಹಪ್ಪಳ, ಗೆಣಸಿನ ಪಾಯಸ, ಕುಡು ಸಾರು, ವಡೆ, ಅಂಬಡೆ, ಚಟ್ಟಂಬಡೆ. ಪೇರಡ್ಡೆ ಪಾಯಸ, ಹುರುಳಿ ಸಾರು, ಸ್ಯಾವಿಗೆ–ಕಾಯಿ ಹಾಲು, ಹರಿವೆ ಸೊಪ್ಪಿನ ಪಲ್ಯ, ಉಪ್ಪಿನಕಾಯಿ, ಉಪ್ಪುಕರಿ, ಹೋಳಿಗೆ–ಪಾಯಸ, ರಸಾಯನ–ಅವಲಕ್ಕಿ, ಹಪ್ಪಳ–ಸೆಂಡಗೆ, ಮಡ್ಡಿ ಮೊದಲಾದುವು ಹಿಂದೆ ಜನರು ಸೇವಿಸುತ್ತಿದ್ದರು. ಆಟಿ ತಿಂಗಳಲ್ಲಿ ಕೆಲವನ್ನಾದರೂ ತಯಾರಿಸಿ ಉಣಬಡಿಸುತ್ತಾರೆ. ಈಗ ಅಡುಗೆ ಕೂಟದವರು ಇವನ್ನೆಲ್ಲಾ ತಯಾರಿಸಿ ನೀಡುತ್ತಿದ್ದಾರೆ.

**ಹೊಸ್ತಿಲು ಬರೆಯುವ ಹಬ್ಬ ಆಟ ಹುಣ್ಣಿಮೆ :** ಮರೆತು ಹೋಗುತ್ತಿರುವ ಹಬ್ಬಗಳಲ್ಲಿ ಇದು ಒಂದು. ಆಟಿ ಹುಣ್ಣಿಮೆಯ ದಿವಸ ಮನೆ ಬಾಗಿಲಿನ ಹೊಸ್ತಿಲಿಗೆ ಹೂವುಗಳಿಂದ ಹಾಗೂ ಹುರುಳಿಯ ಸಣ್ಣ ಗಿಡಗಳಿಂದ ಶೃಂಗರಿಸಿ ರಂಗೋಲಿ ಬರೆದು ಪೂಜಿಸುವ ದಿನ.

ಆಟಿಡೊಂಜಿ ದಿನ ಅಂದರೆ ಒಂದು ದಿನ ಮಾತ್ರ ಅಲ್ಲ. ವರ್ಷವಿಡೀ ಆಚರಿಸುವಂತಾಗಬೇಕು. ಆಟಿ ಹಾಗೂ ಸೋಣ ತಿಂಗಳ ಆಚರಣೆಯೂ ನಮ್ಮ ನೆಲದ ಸಂಸ್ಕೃತಿಯಾಗಿದೆ. ತುಳುನಾಡಿನ ಮರೆಯಲಾಗದ ಘಮಘಮಿಸುವ ಆಹಾರಗಳಾಗಿವೆ. ಇದನ್ನು ನಮ್ಮ ಮಕ್ಕಳಿಗೆ ತಿಳಿಸಬೇಕು. ವಾರಕ್ಕೊಮ್ಮೆಯಾದರೂ ಆಟಿಡೊಂಜಿ ದಿನದ ತಿನಿಸುಗಳನ್ನು ತಯಾರಿಸಿ ಪರಿಚಯಿಸಬೇಕು.


## ನಿಧನ



### ಕರಂದಾಡಿ ಗಿರೀಶ್ ರಾವ್

ಬೆಂಗಳೂರು ವಿದ್ಯಾರಣ್ಯಪುರದಲ್ಲಿ ವಾಸ್ತವ್ಯವಿದ್ದ ಕರಂದಾಡಿ ಗಿರೀಶ್ ರಾವ್ (70 ವರ್ಷ) ದಿನಾಂಕ 20.07.2021ರಂದು ಸ್ವಗೃಹದಲ್ಲಿ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧುಬಾಂಧವರನ್ನು ಅಗಲಿದ್ದಾರೆ.

**** ****



### ಪಾದೆಬೆಟ್ಟು ಗಣೇಶ್ ಶಾನ್‌ಬಾಗ್

ಪಡುಬಿದ್ರಿ ಪಾದೆಬೆಟ್ಟು ಗಣೇಶ್ ಶಾನ್‌ಬಾಗ್ (85ವರುಷ) ತಾ.01.08.2021ರಂದು ದೈವಾಧೀನರಾಗಿರುತ್ತಾರೆ. ಅವರು 3 ಗಂಡು, ಒಂದು ಹೆಣ್ಣು ಮಗಳು ಹಾಗೂ ಧರ್ಮಪತ್ನಿ ಸುಶೀಲಮ್ಮ ಅವರನ್ನು ಅಗಲಿದ್ದಾರೆ.

**** ****

### ಪಿ.ಬಿ.ಭುಜಂಗ ರಾವ್

ಪಡುಬಿದ್ರಿಯ ದಿ| ಬಾಬುರಾವ್ ಮತ್ತು ದಿ| ಪದ್ಮಾವತಿ ಅಮ್ಮನವರ ಪುತ್ರ ಪಿ.ಬಿ.ಭುಜಂಗ ರಾವ್ ಇವರು ತಾ.31.07.2021ರಂದು ನಿಧನರಾದರು. ಇವರಿಗೆ 89 ವರ್ಷ ವಯಸ್ಸಾಗಿತ್ತು. ಇವರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

**** ****

### ಶ್ರೀ ಅನಂತ ಪದ್ಮನಾಭ ರಾವ್

ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದ ಟ್ರಸ್ಟಿ ಹಾಗೂ ಸಮಾಜಬಾಂಧವರಾದ ಶ್ರೀ ಅನಂತ ಪದ್ಮನಾಭ ರಾವ್‌ರವರು ತಾ.01.08.2021 ಬೆಳಿಗ್ಗಿನ ಜಾವ ಸ್ವರ್ಗಸ್ಥರಾದರು. ಶ್ರೀಯುತರಿಗೆ 66 ವರ್ಷ ಪ್ರಾಯವಾಗಿರುತ್ತದೆ.

## ಫಲಾನುಭವಿಗಳಿಗೆ ಕಿಟ್ ವಿತರಣೆ

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಬಡ ಬ್ರಾಹ್ಮಣ ಕುಟುಂಬಗಳಿಗೆ ದಿನಸಿ ಕಿಟ್‌ನ್ನು ನೀಡಿದ್ದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ನೇತೃತ್ವದಲ್ಲಿ ಜಿಲ್ಲೆಯ ಬಂಟ್ವಾಳ, ಪುತ್ತೂರು, ಸುಳ್ಯ, ಮೂಡುಬಿದಿರೆ, ಸುರತ್ಕಲ್, ಬೆಳ್ತಂಗಡಿ ಸಂಘಗಳ ಸಹಕಾರದಿಂದ ಸುಮಾರು ರೂ.1000 ಮೌಲ್ಯದ 67 ಕಿಟ್‌ಗಳನ್ನು ಸ್ಥಾನಿಕ ಬ್ರಾಹ್ಮಣ ಫಲಾನುಭವಿಗಳಿಗೆ ವಿತರಿಸಲಾಯಿತು. ಮಂಡಳಿಯ ಅಧ್ಯಕ್ಷರಾದ ಶ್ರೀ ಸಚ್ಚಿದಾನಂದಮೂರ್ತಿ, ಎಲ್ಲಾ ನಿರ್ದೇಶಕರುಗಳಿಗೆ, ನಮ್ಮ ಭಾಗದ ಪ್ರಭಾರಿ ಶ್ರೀ ರಾಜೇಶ್ ನಡ್ಡಿಂತಿಲಾಯ, ವಿಪ್ರ ಸಮಾಗಮ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ರಾವ್ ಹಾಗೂ ಸಹಕರಿಸಿದ ಸರ್ವರಿಗೂ ವಂದನೆಗಳು.

–ಪಿ.ಶ್ರೀಕಾಂತ್ ರಾವ್



## ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀ ಕೆ. ರಾಜಶೇಖರ ರಾವ್ ನಿವೃತ್ತಿ

ಮಜೂರು ಗ್ರಾಮದ ಕರಂದಾಡಿ ಶ್ರೀ ಕೆ.ರಾಜಶೇಖರ ರಾವ್ ಇವರು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯಿಂದ ನಿವೃತ್ತರಾಗಿದ್ದಾರೆ. ಇವರು ಮಜೂರು ಗ್ರಾಮದ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದಾರೆ. ನಿವೃತ್ತಿಯ ಮುಂಚೆ ಬ್ರಹ್ಮಾವರದ ಕಳ್ತೂರು ಗ್ರಾಮ ಪಂಚಾಯತಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

## ಶುಭ ವಿವಾಹ

ಶ್ರೀಮತಿ ಸಂಧ್ಯಾ ಹಾಗೂ ಕೀರ್ತಿಶೇಷ ಉದಯಕುಮಾರ್ ಇವರ ಪುತ್ರಿ **ಚಿ| ಸೌ| ರಮ್ಯಾ** ಹಾಗೂ ಪೆರ್ಡೂರು ಶ್ರೀಮತಿ ಗೀತಾ ಹಾಗೂ ಪದ್ಮನಾಭ ಕೊಟ್ಟಾರಿ ಇವರ ಪುತ್ರ **ಚಿ| ಆಶ್ಲೇಷ** ಇವರ ವಿವಾಹವು ತಾ.13.05.2021ರಂದು ಕರಂದಾಡಿ ಅನ್ನಪೂರ್ಣ ನಿವಾಸದಲ್ಲಿ ನೆರವೇರಿತು.

**ನಮ್ಮ ಸಮಾಜ ಬಾಂಧವರಾದ ನಟರಾಜ ಪರ್ಕಳ ಇವರು ಡಾಯ್ಜಿವರ್ಲ್ಡ್ ಚಾನಲ್ ಡೆನ್ 287– ರಲ್ಲಿ ಪ್ರತೀ ಶನಿವಾರ ಬೆಳಿಗ್ಗೆ 8.30 ಕ್ಕೆ ತತ್ವ ಪ್ರಸಾರ ಎಂಬ ಕಾರ್ಯಕ್ರಮವನ್ನು ನೀಡುತ್ತಿದ್ದು ನಮ್ಮ ಸಮಾಜಬಾಂದವರು ವೀಕ್ಷಿಸಬೇಕಾಗಿ ಈ ಮೂಲಕ ವಿನಂತಿ.**


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams





ಎಮ್. ದೇವಾನಂದ್ ಭಟ್ Cell : 9845644556

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655




## ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ-ಅರ್ಚಕ ಪರಿಪಾಲನ ಸಭಾ ಮಂಗಳೂರು

ಇವರ ನೇತೃತ್ವದಲ್ಲಿ

**ಶ್ರೀ ಗಾಯತ್ರಿ ಮಂತ್ರಾಕ್ಷರ ಲಕ್ಷ ಜಪಾನುಷ್ಠಾನ ವಿಧಿ**

ತಾರೀಕು 23-08-2021ರಿಂದ ಸೋಮವಾರದಿಂದ
ತಾರೀಕು 03-09-2021ನೇ ಶುಕ್ರವಾರದವರೆಗೆ 12 ದಿನಗಳ ಕಾಲ ನಡೆಯಲಿದೆ.
ಪ್ರತಿದಿನ ಒಬ್ಬರು ಬೆಳಿಗ್ಗೆ 108 ಹಾಗೂ ಸಂಜೆ 108ರಂತೆ
12 ದಿನಕ್ಕೆ ಒಬ್ಬರಿಂದ 2400 ಜಪ.
ಹತ್ತು ಜನ ಮಾಡಿದರೆ 24000. ನೂರು ಜನ ಮಾಡಿದರೆ 240000.
ಸಾವಿರ ಜನ ಮಾಡಿದರೆ 2400000.

**ಈ ಮಹತ್ಕಾರ್ಯದಲ್ಲಿ ನಮ್ಮ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇವರಿಂದ ಕನಿಷ್ಠ ನೂರು ಜನರಾದರೂ ಭಾಗವಹಿಸಬೇಕಾಗಿ ಕೋರಿಕೆ.**

**ಹೆಚ್ಚಿನ ಮಾಹಿತಿಗಾಗಿ ಕೊಕ್ರಾಡಿ ಸುರೇಶ್ ರಾವ್ (919036443884)**

ತಮ್ಮ ನಿರೀಕ್ಷೆಯಲ್ಲಿ,
ಅಧ್ಯಕ್ಷರು & ಕಾರ್ಯದರ್ಶಿ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ.

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು, ಪಡುಬಿದ್ರಿ

ಭಕ್ತಾಭಿಮಾನಿಗಳೇ,
ಇದೇ ಬರುವ ದಿನಾಂಕ 16.08.2021ನೇ ಸೋಮವಾರದಿಂದ ದಿನಾಂಕ 16.09.2021 ನೇ ಗುರುವಾರದವರೆಗೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ

**ಸೋಣಾರತಿ–ಹೂವಿನ ಪೂಜೆ**

ದೇವಳದ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ನಡೆಯಲಿದ್ದು, ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಪೂಜೆ ಮಾಡಿಸುವವರು ಬರುವಾಗ ಸ್ವತಃ ಹೂ, ಹಣ್ಣುಕಾಯಿ ಮತ್ತು ಪೂಜೆಗೆ ರೂ. 400/– ರಂತೆ ತರಬೇಕು. ಪೂಜೆಯ ಸಮಯ ಪ್ರತಿದಿನ ರಾತ್ರಿ 6.30 ರಿಂದ 7.30 ಸೇವೆ ಮಾಡಿಸುವವರು ಈ ಕೆಳಗಿನ ಮೊಬೈಲ್ ನಂಬರ್‌ಗಳನ್ನು ಸಂಪರ್ಕಿಸಿ; ದಿವಾಕರ ರಾವ್ (9902169119), ವಿಜಯ ದೇವರಾಯ ಶರ್ಮ (8970485179) ಸುಧಾಕರ ಬೆಳ್ಳೆ (9845193103), ಬಿ. ಜಯರಾಮ್ ರಾವ್ (9844545040)**

–ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು

### ಶುಭಜನನ

ಎಲ್ಲೂರು ಶ್ರೀ ಕೀರ್ತಿಗಣೇಶ್ ಮುರಳೀಧರ ರಾವ್ ಹಾಗೂ ಗಾಯತ್ರಿ ಜಿ.ರಾವ್ ದಂಪತಿಗಳಿಗೆ ತಾ. 31-07-2021 ರಂದು ಗಂಡು ಮಗುವಿನ ಜನನವಾಗಿರುತ್ತದೆ.

**–: ಶುಭಾಶಯಗಳು :–**

**"ಶ್ರೀ ಶಾರದಾಂಬೆಗೆ ವಂದಿಸುತ್ತಾ "ಶ್ರೀ ಶಾರದಾ" ಪತ್ರಿಕೆಯು ನವರಸಭರಿತವಾಗಿ ಸಮಾಜಕ್ಕೆ ದಾರಿದೀಪವಾಗಲಿ" ಎಂದು ಹಾರೈಸುವ**

**ಜಿ.ಕೆ.ಕೋಲ್ವೆ, ಉಡುಪಿ**

ಮಹಾಪೋಷಕರು, ಶ್ರೀಶಾರದಾ ಪತ್ರಿಕೆ ಹಾಗೂ ಮಾಜಿ ಉಪಾಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣಮಹಾಮಂಡಲ


*With Best Complimemts From*

SRI M. SHAILESH RAO Ph : 9448624324
B.E., Civil
Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.
Website : shreemaalavikaassociates.com

**Buying and selling shares as easy as checking your emails**

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

# ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ

–ಡಾ.ಬಿ ಜನಾರ್ದನ ಭಟ್

*ವಾರಣವದನ । ತ್ರೈಲೋಕ್ಯಸುಮೋಹನ*
*ವಾರಣ ವದನ॥ ಪಲ್ಲವಿ॥*
*ವಾರಿಜಾಕ್ಷ ವರಗುಣಾಕರ।*
*ವಾರಿಜಾಕ್ಷಿ ವರದಾಯಕ ಸನ್ನುತ।*
*ನಾರದಾದಿ ಮುನಿವಂದಿತ ಪದಯುಗ॥ ಅನುಪಲ್ಲವಿ॥*
*ಸುಂದರಾಂಗ ಸುಕಲಾನ್ವಿತ ನಿಭಚರಣ। ಕಟಿಶೋಭಿತವ್ಯಾಳಸ।*
*ಬಂಧನಾಬ್ಧಿ ಶತಕೋಟಿಸದೃಶ ಕಿರಣ॥*
*ಚಂದನಾಂಗಾರ್ಚಿತ ಸುಮನೋಹರ!*
*ಮಂದಹಾಸ ಮಹಿಮಾಂಬುಧಿಚಂದಿರ ॥ ॥ ೧ ॥*
*ಕಂಬುಗ್ರೀವ ಕಮನೀಯ ಕರಾಂಬುರುಹ। ಪಾಶಾಂಕುಶಧರವರ।*
*ಶಂಬರಾರಿಜಿತುತನಯ ಮಧುರಗೇಹ॥*
*ಜಂಭಭೇದಿವಂದಿತ ತ್ರಿವಂದಿತ।*
*ಲಂಬೋದರ ವಿಘ್ನಾಂಬುಧಿ ಕುಂಭಜ ॥ ॥ ೨ ॥*
*ಚಾರು ಬಾರಕನ್ಯಾಪುರವರ ನಿಲಯ। ಮೃಕಂಡುಜ ಮುನಿವರ।*
*ಸಾರ ಮಂತ್ರಸ್ಥಾಪಿತ ಮಂಗಲ ಕೆತೆಯ॥*
*ವರಕಪಿತ್ಥಫಲೋರಸಭುಂಜಿತ।*
*ಧೀರ ಲಕ್ಷ್ಮೀನಾರಾಯಣ ಸಖಸುತ ॥ ॥ ೩ ॥*

ಬಹಳ ಪ್ರಸಿದ್ಧವಾಗಿರುವ, ಹೆಚ್ಚಿನ ಯಕ್ಷಗಾನ ಪ್ರಸಂಗಗಳ ಪ್ರಾರಂಭದಲ್ಲಿ ಬಳಸುವ ಮೇಲಿನ ಗಣಪತಿ ಸ್ತುತಿಯನ್ನು ರಚಿಸಿದವರು ಯಾರೆನ್ನುವುದನ್ನು ಬಹುತೇಕರು ಅರಿಯರು. ಈ ಕೀರ್ತನೆಯನ್ನು ರಚಿಸಿದವರು ದಕ್ಷಿಣ ಕನ್ನಡದ ಹರಿದಾಸ ಪರಂಪರೆಯ ಇಪ್ಪತ್ತನೆಯ ಶತಮಾನದ ಶ್ರೇಷ್ಠ ಆಶುಕವಿ ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ (1854–1924). ಅವರು ಕೇವಲ ಭಕ್ತಕವಿಯಷ್ಟೇ ಅಲ್ಲ, ಸಾಮಾಜಿಕ ಜಾಗೃತಿಗೆ, ಸಾಂದರ್ಭಿಕ ಪ್ರತಿಕ್ರಿಯೆಗಳಿಗೆ, ಆಚರಣಾತ್ಮಕ ಉದ್ದೇಶಗಳಿಗೆ ಮತ್ತು ರಸಿಕತೆಯ ಅಭಿವ್ಯಕ್ತಿಗಾಗಿಯೂ ಕವಿತೆಗಳನ್ನು ಬರೆದ ಸವ್ಯಸಾಚಿ; ನಾಲ್ಕು ಭಾಷೆಗಳಲ್ಲಿ ಹಾಡು ಕಟ್ಟುತ್ತಿದ್ದ ಚತುರ್ಭಾಷಾ ಕವಿ ಮತ್ತು ಜತೆಜತೆಗೆ ಸಂಸಾರಿಯೂ–ಅವಧೂತನೂ ಆಗಿದ್ದ ವಿಶಿಷ್ಟ ವ್ಯಕ್ತಿತ್ವದ ಅನುಭಾವಿ. ಅವರು ಈ ಎಲ್ಲ ರಚನೆಗಳನ್ನು ಸನ್ನಿವೇಶದ ಅಗತ್ಯಕ್ಕೆ ತಕ್ಕಂತೆ ಆಗಿಂದಾಗ್ಗೆ ಮನಸ್ಸಿನಲ್ಲಿಯೇ ರಚಿಸಿ, ರಾಗವಾಗಿ ಹಾಡಿ ಸಮಾಜದ ಮೌಖಿಕ ಪರಂಪರೆಗೆ ಒಪ್ಪಿಸಿ ಹೋಗಿಬಿಡುತ್ತಿದ್ದರು. ಅವುಗಳನ್ನೆಲ್ಲ ಅವರ ಸಮಕಾಲೀನರೂ, ಆಮೇಲಿನ ಆಸಕ್ತ ಸಂಪಾದಕ – ಸಂಶೋಧಕರೂ ಜಾನಪದ ಮೂಲಗಳಿಂದ ಸಂಗ್ರಹಿಸಿ ಪುಸ್ತಕ ರೂಪಗಳಲ್ಲಿ ಪ್ರಕಟಿಸಿರುವುದರಿಂದ ಈಗ ಸಾಕಷ್ಟು ಕವಿತೆಗಳು ಉಳಿದಿವೆ.

**ಮೂರು ಮಾರ್ಗಗಳು :** ಕರಾವಳಿಯ ಕವಿರಾಜ ಮಾರ್ಗವನ್ನು ಪರಿಚಯಿಸುವಾಗ ನಾವು ಪ್ರತ್ಯೇಕ ಮೂರು ಪರಂಪರೆಗಳನ್ನು ಗಮನಿಸಬೇಕು. ಅವುಗಳಲ್ಲಿ ಮೊದಲನೆಯದು – ಪಂಜೆ ಮಂಗೇಶರಾಯರು ಮತ್ತು ಮಂಜೇಶ್ವರ ಗೋವಿಂದ ಪೈಗಳು ಪ್ರಾರಂಭಿಸಿ ಬೆಳೆಸಿದ ಪಾಶ್ಚಾತ್ಯ ಆಧುನಿಕ ಕಾವ್ಯದ ದಾರಿಯನ್ನು ಹಿಡಿದ ಪ್ರಸ್ಥಾನ. ಪೇಜಾವರ ಸದಾಶಿವರಾಯರು ಬಂದಿದ್ದು ಈ ಪರಂಪರೆಯಲ್ಲಿಯೇ. ಪಾ. ವೆಂ. ಆಚಾರ್ಯರನ್ನೂ ಇದೇ ಪರಂಪರೆಗೆ ಸೇರಿಸಬಹುದು. ಎರಡನೆಯದು– ಹರಿದಾಸ ಪರಂಪರೆ. ಭಕ್ತಿ ಮಾರ್ಗದ ಕೀರ್ತನೆಗಳು ಮತ್ತು ಇತರ ಧಾರ್ಮಿಕ–ಸಾಮಾಜಿಕ ಉದ್ದೇಶದ ಪದ್ಯ ಕೃತಿಗಳನ್ನು ರಚಿಸಿದವರ ಒಂದು ಪರಂಪರೆ ಜಿಲ್ಲೆಯಲ್ಲಿತ್ತು. ಈ ಪರಂಪರೆಯ ಪ್ರತಿನಿಧಿಯಾಗಿ ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ ಅವರನ್ನು ಇಲ್ಲಿ ಪರಿಚಯಿಸಲಾಗಿದೆ. ಮುಳಿಯ ಮೂಕಾಂಬಿಕಾ ಅಮ್ಮ (1870–1942), ಮೂಕಜ್ಜಿ (ಉಳ್ಳೂರು ಮೂಕಾಂಬಿಕಾ ಅಮ್ಮ, 1908–1998), ನೆಲ್ಲಿಕಾರು ‘ಜೈನಮಹಿಳೆ’ (ರಾಧಾಮತಿ ಅಮ್ಮ – 1899–1970), ಬೆಳ್ಳೆ ಸೀತಾರತ್ನಮ್ಮ (1910–1995) ಮುಂತಾದವರು ನಂತರ ಈ ಪರಂಪರೆಯಲ್ಲಿ ಬಂದರು. ಪಾವಂಜೆ ಹರಿದಾಸರಿಗಿಂತ ಹಿಂದೆ ಉಡುಪಿ ಪೆರಂಪಳ್ಳಿಯ ಹರಿದಾಸ ನೆಕ್ಕಾರು ಕೃಷ್ಣದಾಸರು (ಕಾಲ ನಿರ್ಣಯ ಆಗಿಲ್ಲ; 1750 ರ ಆಸುಪಾಸು – ಅದರ ನಂತರ ಎಂದು ಹಾವನೂರರು ಊಹಿಸಿದ್ದಾರೆ) ಮೋಗ್ಲಿಂಗ್, ಕಿಟೆಲ್ ಮುಂತಾದವರಿಂದ ಪುರಂದರದಾಸ ಮತ್ತು ಕನಕದಾಸರ ಜತೆಗೆ ಗುರುತಿಸಲ್ಪಟ್ಟ ಗಣ್ಯ ದಾಸ ಕವಿಯಾಗಿದ್ದರು. ಅವರ ಅಂಕಿತ ‘ವರಾಹ ತಿಮ್ಮಪ್ಪ’. ಮೂರನೆಯದು – ಮುಳಿಯ ಪರಂಪರೆ. ನವೋದಯದ ಒಂದು ಮುಖ್ಯ ಲಕ್ಷಣ– ವಿಸ್ಮೃತಿಯನ್ನು ತೊಡೆದು ಹಾಕಿ, ನಮ್ಮ ಪರಂಪರೆಯ ಸತ್ವವನ್ನು ತೋರಿಸಿಕೊಟ್ಟು ಜನರಲ್ಲಿ ಆತ್ಮಾಭಿಮಾನವನ್ನು ಹುಟ್ಟಿಸುವುದು. ಹೊಸಗನ್ನಡದ ನವೋದಯ ಕಾಲದಲ್ಲಿ ಮುಳಿಯ ತಿಮ್ಮಪ್ಪಯ್ಯ, ಕಡೆಂಗೋಡ್ಲು ಶಂಕರ ಭಟ್ಟರು ಮತ್ತು ಸೇಡಿಯಾಪು ಕೃಷ್ಣ ಭಟ್ಟರು ಮುಖ್ಯರಾಗಿದ್ದ ಈ ಪರಂಪರೆಯ ಕವಿಗಳು ಈ ಬಗೆಯ ಸಾಹಿತ್ಯ ಪ್ರಜ್ಞೆಯನ್ನು ತೋರಿಸಿದರು. ಇವರೆಲ್ಲರೂ ಸಂಸ್ಕೃತ ಮತ್ತು ಕನ್ನಡ ಭಾಷೆ, ಸಾಹಿತ್ಯಗಳ ಆಳವಾದ ಪರಿಚಯವಿದ್ದವರು ಮತ್ತು ಆಧುನಿಕತೆಗೆ ಹೊಂದಿಕೊಳ್ಳುವ ಸಣ್ಣ ಕಾವ್ಯಗಳು ಮತ್ತು ಕಿರುಗವನಗಳ ಸ್ವರೂಪವನ್ನು ಸ್ವೀಕರಿಸಿದರೂ ಇಂಗ್ಲಿಷಿನ ಅನುಕರಣೆ ಮಾಡದವರೂ ಆಗಿದ್ದರು.

(ಮುಂದುವರಿಯುವುದು...)



## ಡಾ. ಬಿ. ಜನಾರ್ದನ ಭಟ್

ಉಡುಪಿ ಜಿಲ್ಲೆ, ಕಾರ್ಕಳ ತಾಲೂಕಿನ ಬೆಳ್ಮಣ್ಣು ಗ್ರಾಮದ ಡಾ. ಬಿ. ಜನಾರ್ದನ ಭಟ್ (1959) ಸರಕಾರಿ ಪ.ಪೂ. ಕಾಲೇಜು, ಬೆಳ್ಮಣ್ಣು ಇಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಎಂ.ಜಿ.ಎಂ. ಕಾಲೇಜಿನಲ್ಲಿ ಇಂಗ್ಲೀಷ್ ಮೇಜರ್ ತೆಗೆದುಕೊಂಡು ಬಿ.ಎ. ಪದವಿ ಪಡೆದ ನಂತರ ಅವರು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಇಂಗ್ಲೀಷ್ ಎಂ.ಎ. ಪದವಿಯನ್ನು ಪಡೆದು ಸರಕಾರಿ ಪದವಿಪೂರ್ವ ಇಲಾಖೆಯಲ್ಲಿ ಇಂಗ್ಲೀಷ್ ಉಪನ್ಯಾಸಕರಾಗಿ ಸೇರಿ ಪಡುಬಿದ್ರಿ, ಎರ್ಮಾಳು, ಪಲಿಮಾರು ಮತ್ತು ಬೆಳ್ಮಣ್ಣು ಇಲ್ಲಿ ಸೇವೆ ಸಲ್ಲಿಸಿದರು. ಪ್ರಾಂಶುಪಾಲರಾಗಿ ಭಡ್ತಿ ಹೊಂದಿ ಮುದರಂಗಡಿ ಮತ್ತು ಬೆಳ್ಮಣ್ಣು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 2019 ರಲ್ಲಿ ನಿವೃತ್ತರಾದರು. ಸೇವೆಯಲ್ಲಿರುವಾಗ ಹೈದ್ರಾಬಾದಿನ ಸಿ.ಐ.ಇ.ಎಫ್.ಎಲ್. ನಲ್ಲಿ ಪಿ.ಜಿ.ಡಿ.ಟಿ.ಇ. ಪದವಿ, ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿಗಳನ್ನು ಪಡೆದು ಮಂಗಳೂರು ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ. ಪಡೆದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಬಹಳಷ್ಟು ಕೆಲಸ ಮಾಡಿರುವ ಬಿ. ಜನಾರ್ದನ ಭಟ್ ಅವರು 1975ರಲ್ಲಿ ಹತ್ತನೆಯ ತರಗತಿಯಲ್ಲಿರುವಾಗ ‘ಸುಧಾ’ ಪತ್ರಿಕೆಯಲ್ಲಿ ಪ್ರಕಟವಾದ ‘ಪೋಲೀಸರು’ ಎಂಬ ಕಥೆಯಿಂದ ಪ್ರಾರಂಭಿಸಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಸಣ್ಣಕತೆಗಳನ್ನು ಬರೆಯುತ್ತಿದ್ದಾರೆ. ‘ಮೊದಲನೆಯ ಇಲಿ’, ‘ಪುಂಡಗೋಳಿಯ ಕ್ರಾಂತಿ’, ‘ಲೋಕ ಸಂಚಾರ’, ‘ಲಾಫಿಂಗ್ ಕ್ಲಬ್’, ‘ಎಚ್ಚೆ ಹೋಮೋ: ನೋಡಿ ಈ ಮನುಷ್ಯನನ್ನು’ ಮತ್ತು ‘ಮತ್ತೆ ನಾವು ಹಿಂದಿನಂತೆ’ ಇವು ಅವರ ಪ್ರಕಟಿತ ಕಥಾ ಸಂಕಲನಗಳು. ಅವರ ಕಥೆಗಳಿಗೆ ಏಳು ಬಾರಿ ರಾಜ್ಯಮಟ್ಟದ ಪ್ರಶಸ್ತಿ ಬಂದಿದೆ. ‘ಉತ್ತರಾಧಿಕಾರ’ (ವರ್ಧಮಾನ ಪ್ರಶಸ್ತಿ), ‘ಹಸ್ತಾಂತರ’ (ಕ.ಸಾ.ಪ.ದ ವಾಸುದೇವ ಭೂಪಲಂ ದತ್ತಿ ಪ್ರಶಸ್ತಿ), ಮತ್ತು ‘ಅನಿಕೇತನ’ ಕಾದಂಬರಿ ತ್ರಿವಳಿ, ‘ಮೂರು ಹೆಜ್ಜೆ ಭೂಮಿ’ (ಕ.ಸಾ.ಪ.ದ ಭಾರತೀಸುತ ದತ್ತಿ ಪ್ರಶಸ್ತಿ), ‘ಕಲ್ಲು ಕಂಬವೇರಿದ ಹುಂಬ’ (ತರಂಗ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ), ‘ಬೂಬರಾಜ ಸಾಮ್ರಾಜ್ಯ’ ‘ಗಮ್ಯ’ ಅವರ ಕಾದಂಬರಿಗಳು. ಅವರ ಕತೆಗಳಿಗೆ ಏಳು ಬಾರಿ ರಾಜ್ಯಮಟ್ಟದ ಪ್ರಶಸ್ತಿ ಬಂದಿದೆ. ಸುಮಾರು 25 ಸಾಹಿತ್ಯ ವಿಮರ್ಶೆಯ ಕೃತಿಗಳನ್ನು ರಚಿಸಿರುವ ಅವರು ‘ಕರಾವಳಿ ಸಾಹಿತ್ಯ: ನಾಲ್ಕು ಪ್ರಸ್ತಾವನೆಗಳು’ ಕೃತಿಗಾಗಿ ಉಡುಪಿಯ ಗೋವಿಂದ ಪೈ ಸಂಶೋಧನ ಕೇಂದ್ರದ ವಿ.ಎಂ. ಇನಾಂದಾರ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಕತೆ, ಕಾದಂಬರಿ, ಅನುವಾದ, ವಿಮರ್ಶೆ, ಮಕ್ಕಳ ಸಾಹಿತ್ಯ, ಸಂಪಾದಿತ ಗ್ರಂಥಗಳು ಹೀಗೆ ವಿವಿಧ ಪ್ರಕಾರಗಳಲ್ಲಿ ಕೃತಿ ರಚಿಸಿರುವ ಡಾ. ಬಿ. ಜನಾರ್ದನ ಭಟ್ ಅವರ ಪ್ರಕಟಿತ ಕೃತಿಗಳ ಸಂಖ್ಯೆ 82.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ
ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘ಪಾರಾಯಣ’’ ಸಂಜೆ ಗಂಟೆ 4-30ರಿಂದ

**ತಾ.25-08-2021 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.18-08-2021 ಮತ್ತು ತಾ.14-09-2021 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.27-08-2021 ಮತ್ತು ತಾ.11-09-2021 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಸಿಂಹ ಮಾಸದ ವಿಶೇಷ ದಿನಗಳು

| | | | |
|---|---|---|---|
| 16–08–2021 | ಸಿಂಹ ಸಂಕ್ರಮಣ | 31–08–2021 | ಶ್ರೀ ಕೃಷ್ಣ ಲೀಲೋತ್ಸವ, ವಿಟ್ಲಪಿಂಡಿ |
| 18–08–2021 | ಸರ್ವೈಕಾದಶಿ | 03–09–2021 | ಸರ್ವೈಕಾದಶೀ |
| 20–08–2021 | ವರಮಹಾಲಕ್ಷ್ಮೀ ವ್ರತಂ | 07–09–2021 | ಅಮಾವಾಸ್ಯೆ |
| 21–08–2021 | ಋಗುಪಾಕರ್ಮ | 08–09–2021 | ವರ್ಷಋತು ಭಾದ್ರಪದ ಮಾಸದ ಶುಕ್ಲ ಪಕ್ಷಾರಂಭ |
| 22–08–2021 | ಯಜುರುಪಾಕರ್ಮ, ಹುಣ್ಣಿಮೆ, ರಕ್ಷಾಬಂಧನ | 09–09–2021 | ಗೌರಿ ತೃತೀಯ, ಸಾಮೋಪಾಕರ್ಮ |
| 23–08–2021 | ವರ್ಷಋತು ಶ್ರಾವಣ ಮಾಸದ ಕೃಷ್ಣ ಪಕ್ಷಾರಂಭ | 10–09–2021 | ಗಣೇಶ ಚತುರ್ಥಿ |
| 25–08–2021 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.00 | 11–09–2021 | ಋಷಿಪಂಚಮಿ |
| | | 16–09–2021 | ಕನ್ಯಾ ಸಂಕ್ರಮಣ |
| 30–08–2021 | ಶ್ರೀ ಕೃಷ್ಣಜನ್ಮಾಷ್ಟಮಿ, ಚಂದ್ರೋದಯ ರಾತ್ರಿ 12–16 | 19–09–2021 | ಅನಂತ ಚತುರ್ದಶಿ |
| | | 20–09–2021 | ಹುಣ್ಣಿಮೆ |


Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



## ಶ್ರೀನಿವಾಸ್ ಹೆಬ್ಬಾರ್‌ರಿಗೆ ಡಾಕ್ಟರೇಟ್

ನಿಟ್ಟೆ ಎಂ.ಜಿ.ಎಸ್.ಎಂ. ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿಟಿಕಲ್ ಸೈನ್ಸ್ ಕಾಲೇಜಿನ ಉಪನ್ಯಾಸಕರಾದ ಶ್ರೀನಿವಾಸ್ ಹೆಬ್ಬಾರ್ ಅವರು ಮಂಡಿಸಿದ Investigation and development of centella asiatica with the nano vesicular systems for the treatment of Alzheimers disease ಎಂಬ ಮಹಾಪ್ರಬಂಧಕ್ಕೆ ಡಾಕ್ಟರ್ ಅಖಿಲೇಶ್ ದುಬೇ ಅವರ ಮಾರ್ಗದರ್ಶನದಲ್ಲಿ ಪ್ರಸಿದ್ಧ ನಿಟ್ಟೆ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ ಇವರು ಬಾರಕೂರಿನ ಶ್ರೀಯುತ ಕೃಷ್ಣ ಹೆಬ್ಬಾರ್ ಮತ್ತು ಶ್ರೀಮತಿ ಗೀತಾ ಹೆಬ್ಬಾರ್ ಅವರ ಪುತ್ರರಾಗಿದ್ದಾರೆ.

## ಕಣ್ಮರೆಯಾದ ಮಾಣಿಕ್ಯ ಕೆ.ಸುಬ್ಬ ರಾವ್ ಕೋರೆಗಾವ್



ಕುಂಜಾರು ದಿ| ಶಿವರಾಮ ಶ್ಯಾನುಭಾಗ್ ಹಾಗೂ ದಿ| ಲಕ್ಷ್ಮೀ ಇವರ ಪುತ್ರ ಮಹಾರಾಷ್ಟ್ರದ ಕೊರೆಗಾಂವ್‌ನಲ್ಲಿ ಯಶಸ್ವಿ ಹೋಟೇಲು ಉದ್ಯಮಿಯಾಗಿದ್ದ ಶ್ರೀ ಕೆ. ಸುಬ್ಬರಾವ್ ಇತ್ತೀಚೆಗೆ ನಿಧನ ಹೊಂದಿದ್ದಾರೆ. ಇವರು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾದರಸದಂತೆ ತೊಡಗಿಸಿಕೊಂಡವರು. ದೇವರ ಪರಮ ಭಕ್ತರಾದ ಇವರು ಧರ್ಮಶ್ರದ್ಧೆಯ ಧುರಂಧರರಾಗಿ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ದೇವಾಲಯ, ದೈವಾಲಯಗಳ ಜೀರ್ಣೋದ್ಧಾರದಲ್ಲಿ ನೈಪುಣ್ಯತೆಯಲ್ಲಿ ನವೀನತೆಯನ್ನು ಸಾಧಿಸುವಲ್ಲಿ ದಾನಧರ್ಮಾದಿಗಳಿಂದ ಅಪ್ರತಿಮ ಸಾಧನೆಗೈದವರು.

ಬಲಕೈಯಲ್ಲಿ ಕೊಟ್ಟ ದಾನ ಎಡಕೈಗೆ ಗೊತ್ತಾಗದಂತೆ ದಾನಧರ್ಮ ಮಾಡುವುದು ಇವರ ಪ್ರಾಮಾಣಿಕ ನಿಲುವು. ಇವರೊಬ್ಬ ಯಶಸ್ವೀ ಉದ್ಯಮಿಯಾಗಿದ್ದುಕೊಂಡು ಧಾರ್ಮಿಕ ಕ್ಷೇತ್ರದಲ್ಲಿ ಶ್ರೀ ಬಾಲಗಣಪತಿ ದೇವಸ್ಥಾನ, ಕುಂಜಾರುಗಿರಿ ದೇವಿ ದೇವಸ್ಥಾನ, ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನಗಳಿಗೆ ನೀಡಿದ ಕೊಡುಗೆ ಅನುಪಮವಾದದ್ದು. ಇವರು ಸ್ವಹಿತಕ್ಕಿಂತ ಪರ-ಹಿತ ಮೇಲು ಎಂದು ಜೀವನದಲ್ಲಿ ಸಾರ್ಥಕತೆಯನ್ನು ಮೆರೆದರು. ಇವರು ಪಡುಬಿದ್ರೆ ಸ್ಥಾನಿಕ ಬ್ರಾಹ್ಮಣ ಸಭಾ ಇದರ ಸದಸ್ಯರಾಗಿ, ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ ಈ ದೇವಸ್ಥಾನದ ಅಭಿವೃದ್ಧಿಗೆ ನೀಡಿದ ಕೊಡುಗೆ ಸದಾ ನೆನಪಿನ ಅಂಗಳದಲ್ಲಿ ಅಚ್ಚಳಿಯದೆ ಉಳಿಯುವಂತಾಗಿದೆ. ಪರೋಪಕಾರಿಯಾಗಿ, ಸರಳ ಸಜ್ಜನಿಕೆಯ ಸಾಕಾರಮೂರ್ತಿಯಾಗಿ, ಅಜಾತ ಶತ್ರುವಾಗಿ ದೇವರಪಾದ ಸೇರಿದರೂ ಕೂಡ ನಮ್ಮೆಲ್ಲರ ಹೃದಯಾಂತರಾಳದಲ್ಲಿ ಸದಾ ಚಿರಸ್ಥಾಯಿಯಾಗಿ ಇರುತ್ತೀರಿ. ಅಗಲಿದ ಈ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರೆ ಪ್ರಾರ್ಥಿಸುತ್ತೇವೆ.



### ಕು.ಅಪೇಕ್ಷಾ

ಪಡುಬಿದ್ರಿಯ ಶ್ರೀ ಶಿವಪ್ರಸಾದ್ ರಾವ್ (ಪುರೋಹಿತರು) ಮತ್ತು ಗೀತಾ ದಂಪತಿಗಳ ಪುತ್ರಿ ಕು.ಅಪೇಕ್ಷಾ 2020-2021ನೇ ಸಾಲಿನ ದ್ವಿತೀಯ ಪಿ.ಯು.ಸಿ. ವಿನೂತನ ಫಲಿತಾಂಶ ಪದ್ಧತಿಯಲ್ಲಿ ಶೇ.100 ಸಾಧನೆಯನ್ನು ಮಾಡಿರುತ್ತಾಳೆ.



### ಕು.ಮೇಘನಾ

ಎರ್ಮಾಳಿನ ಶ್ರೀಧರ ಕೆ. ಮತ್ತು ಸರಳಾ ದಂಪತಿಗಳ ಪುತ್ರಿ ಕು.ಮೇಘನಾ ಇವಳು 2020-21ನೇ ಸಾಲಿನ ದ್ವಿತೀಯ ಪಿ. ಯು. ಸಿ. ವಿನೂತನ ಪದ್ಧತಿಯಲ್ಲಿ 596/ 600 ಅಂಕಗಳನ್ನು (99.33%) ಪಡೆದಿರುತ್ತಾಳೆ.



### ಕು.ನವ್ಯಶ್ರೀ

ಪಾದೆಬೆಟ್ಟು ರವಿಪ್ರಕಾಶ್ ರಾವ್ ಮತ್ತು ಮಮತಾ ದಂಪತಿಗಳ ಪುತ್ರಿ ಕು.ನವ್ಯಶ್ರೀ ಇವಳು 2020-21 ನೇ ಸಾಲಿನ ಪಿ.ಯು.ಸಿ.ಯ ವಿನೂತನ ಪದ್ಧತಿಯ ಫಲಿತಾಂಶದಲ್ಲಿ ಶೇ. 99.33 ಅಂಕಗಳನ್ನು ಗಳಿಸಿರುತ್ತಾಳೆ.

## ಡಾ| ಬಿ.ಬಾಲಕೃಷ್ಣ ರಾವ್ ಇವರಿಗೆ ಕರ್ನಾಟಕ ಸರಕಾರದಿಂದ ಸನ್ಮಾನ



ಡಾ| ಬಿ.ಬಾಲಕೃಷ್ಣ ರಾವ್ ಇವರು ಸದ್ಯ ಬೆಳ್ಮಣ್ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಾ ಇದ್ದಾರೆ. ಇವರು ಬೆಳ್ಮಣ್ಣಿನ ದಿವಂಗತ ಬೈಲು ಮನೆ ದೇವರಾವ್ ಹಾಗೂ ಶಚೀದೇವಿಯವರ ಸುಪುತ್ರ. ಇವರ ಶ್ಲಾಘನೀಯ ಸೇವೆಯಿಂದಾಗಿ ಬೆಳ್ಮಣ್ ಪ್ರಾಥಮಿಕ ಆರೋಗ್ಯ ಕೇಂದ್ರವು ಮಾದರಿ ಆರೋಗ್ಯ ಕೇಂದ್ರವಾಗಿ ಹೆಸರು ಗಳಿಸಿದೆ. ಇತ್ತೀಚೆಗೆ ಕಾರ್ಕಳದಲ್ಲಿ ಕರ್ನಾಟಕ ಸರಕಾರದ ಆರೋಗ್ಯ ಸಚಿವರಾದ ಡಾ| ಸುಧಾಕರರವರಿಂದ ಉತ್ತಮ ಸೇವೆಗಾಗಿ ಸನ್ಮಾನಿತರಾಗಿದ್ದಾರೆ. ಇವರು ನಮ್ಮ ಸಮಾಜದ ಹೆಮ್ಮೆಯ ಪುತ್ರರಾಗಿದ್ದಾರೆ.


ಶುಭಾಶಯಗಳೊಂದಿಗೆ




**ಡಾ| ವಿಜಯಾ ರಾವ್ ವೈ.ಬಿ**
ಎಂ.ಬಿ.ಬಿ.ಎಸ್; ಡಿ.ಜಿ.ಓ.(ಡಿ.ಎನ್.ಬಿ)
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು
ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ
ಫೋನ್ : 9448164327

*With Best Compliments from :*



***Dr. Sanath S. Rao***
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

PRODUCTS ARE AVAILABLE AT ATTRACTIVE DISCOUNT PRICES




**BATTERY PLANET**
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

With Best Compliments From :
BUILDING DREAMS, ENHANCING LIVES.



NAKSHATRA
GANDHINAGAR
SOLITAIRE
HATHILL,
HABITAT ONE 54
DEREBAIL
ANANTESSH
CAR STREET,
Land® Trades
BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :

# "ಉಡುಪಿ ಜಿಲ್ಲೆಯಲ್ಲಿ ಕೃಷಿ ಕ್ರಾಂತಿ" ಉಡುಪಿಯ ಶಾಸಕರೊಂದಿಗೆ ನಮ್ಮವರು

ಉಡುಪಿ ಜಿಲ್ಲೆಯಲ್ಲಿ ಕೃಷಿ ಕ್ಷೇತ್ರ ಕಳೆಗುಂದುತ್ತಿದ್ದ ಕಾಲಘಟ್ಟದಲ್ಲಿ ಕೃಷಿಯ ನೈಜ ವೈಭವವನ್ನು ಮರುಸ್ಥಾಪಿಸಿ, ಆ ಮೂಲಕ ಆತ್ಮನಿರ್ಭರ ಭಾರತದ ಪರಿಕಲ್ಪನೆಯನ್ನು ರಾಜ್ಯ, ರಾಷ್ಟ್ರ ಮಟ್ಟಕ್ಕೆ ತಲುಪಿಸುವ ದಿಕ್ಕಿನಲ್ಲಿ ದಿಟ್ಟ ಪ್ರಯತ್ನ ಮಾಡಿದ ಕೀರ್ತಿ ಉಡುಪಿಯ ಕ್ರಿಯಾಶೀಲ ಶಾಸಕ ಕೆ.ರಘುಪತಿ ಭಟ್‌ರವರಿಗೆ ಸಲ್ಲುತ್ತದೆ. ಉಡುಪಿಯ ನಿಟ್ಟೂರು ಪ್ರೌಢಶಾಲೆಯ ಸ್ವರ್ಣಮಹೋತ್ಸವದ ಕಾರ್ಯಕ್ರಮವನ್ನು ವರ್ಷಪೂರ್ತಿ ಹಡಿಲು ಗದ್ದೆಗಳಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುವ ಮೂಲಕ ಪ್ರೇರಣೆ ಪಡೆದ ಶಾಸಕ ಭಟ್‌ರವರು ಕೃಷಿ ಕ್ರಾಂತಿಯ ಪಣತೊಟ್ಟು ಮುನ್ನಡೆದ ದಾರಿ ರೋಮಾಂಚನಕಾರಿ. ಕೃಷಿಯಜ್ಞ ಸಂಪನ್ನಗೊಳಿಸಲು ಕೇದಾರೋತ್ಥಾನ ಟ್ರಸ್ಟ್ ರಚಿಸಿ, ಅಧ್ಯಕ್ಷತೆಯ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡು ಕೃಷಿ ತಜ್ಞರು, ಹಿರಿಯ ಕೃಷಿಕರು, ಟ್ರಸ್ಟ್ ಪದಾಧಿಕಾರಿಗಳ ಸಲಹೆ ಸೂಚನೆ, ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಅಗತ್ಯ ಚಿಂತನ ಮಂಥನದೊಂದಿಗೆ ಉಡುಪಿ ವಿಧಾನಸಭಾ ಕ್ಷೇತ್ರದಾದ್ಯಂತ ಹಮ್ಮಿಕೊಂಡ ಹಡಿಲು ಭೂಮಿ ಕೃಷಿ ಚಟುವಟಿಕೆ ಒಂದು ದೊಡ್ಡ ಆಂದೋಲನವಾಗಿ ಮಾರ್ಪಾಡಾಗಿದ್ದು ಇತಿಹಾಸ.

ಉಡುಪಿ ವಿಧಾನಸಭಾ ಕ್ಷೇತ್ರದಾದ್ಯಂತ ಗ್ರಾಮ ಗ್ರಾಮಗಳಿಗೂ ತೆರಳಿ, ಯುವಶಕ್ತಿಯನ್ನು ಕ್ರೋಢೀಕರಿಸಿ, ಸ್ಥಳೀಯಾಡಳಿತ ಸಂಸ್ಥೆಗಳು, ಜನಪ್ರತಿನಿಧಿಗಳು, ಸಮಾಜ ಸೇವಾ ಸಂಘ-ಸಂಸ್ಥೆಗಳು, ಗ್ರಾಮಸ್ಥರು ಹಾಗೂ ಎಲ್ಲಾ ವರ್ಗದ ಜನತೆಯ ಸಹಯೋಗವನ್ನು ಪಡೆದು ಮುಂದಡಿ ಇಟ್ಟಿರುವ ಶಾಸಕ ಭಟ್ ರವರ ತುಡಿತ, ಇಚ್ಛಾಶಕ್ತಿ ನಿಜವಾಗಿಯೂ ಮೆಚ್ಚುವಂತಾದ್ದಾಗಿದೆ. ಕೃಷಿ ಚಟುವಟಿಕೆಗೆ ಹಡಿಲು ಭೂಮಿಗಳ ಗುರುತಿಸುವಿಕೆ, ಭೂ ಮಾಲಕರ ಒಪ್ಪಿಗೆ, ತೋಡುಗಳ ಹೂಳೆತ್ತುವಿಕೆ, ಹಡಿಲು ಗದ್ದೆಗಳ ಸ್ವಚ್ಛತೆ, ಗದ್ದೆಗಳ ಉಳುಮೆ, ನೇಜಿ ನಾಟಿ, ಗದ್ದೆಗಳ ಮೇಲ್ವಿಚಾರಣೆ, ಕಳೆ ಕೀಳುವುದು ಇತ್ಯಾದಿ ಸರಣಿ ಅಭಿಯಾನಗಳ ಮೂಲಕ ಶಾಸಕ ಕೆ.ರಘುಪತಿ ಭಟ್‌ರವರ ಸಾರಥ್ಯದಲ್ಲಿ, ಕೇದಾರೋತ್ಥಾನ ಟ್ರಸ್ಟ್ ನೇತೃತ್ವದಲ್ಲಿ ನಡೆದ ಹಡಿಲು ಭೂಮಿ ಕೃಷಿ ಆಂದೋಲನ ಎಲ್ಲರ ಮನಸೂರೆಗೊಂಡಿರುವುದು ವಾಸ್ತವ. ಇವೆಲ್ಲದರ ನಡುವೆ ರಾಜ್ಯದ ಹಲವಾರು ಸಚಿವರು, ಸಂಸದರು, ಶಾಸಕರು, ಗಣ್ಯಾತಿಗಣ್ಯ ಅತಿಥಿಗಳು, ಕೃಷಿ ಪ್ರೇಮಿಗಳು ವಿವಿಧ ಹಂತಗಳ ಸಾಂಕೇತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಕೃಷಿ ಕ್ಷೇತ್ರದ ಸಕಾಲಿಕ ಕಾಯಕಲ್ಪಕ್ಕೆ ಸಾಕ್ಷೀಭೂತರಾಗಿದ್ದು ಕೃಷಿಕರು ಮತ್ತು ಯುವ ಸಮುದಾಯದಲ್ಲಿ ಮಂದಹಾಸ ಮೂಡಿಸಿದೆ.

ಶಾಸಕ ಕೆ.ರಘುಪತಿ ಭಟ್‌ರವರ ನೇತೃತ್ವದ ಈ ಕೃಷಿ ಯಜ್ಞದಲ್ಲಿ ನಿತ್ಯ ನಿರಂತರ ದಣಿವರಿಯದೆ ಸ್ವಯಂಸೇವಕರಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಕೃಷಿ ಪ್ರೇಮಿಗಳ ದಂಡು ಬಹಳ ದೊಡ್ಡದಿದೆ. ಕೃಷಿ ಚಟುವಟಿಕೆಗಳ ಸಂಯೋಜನೆಯಲ್ಲಿ ಶಾಸಕರ ಜೊತೆ ಅಹರ್ನಿಶಿ ತೊಡಗಿಸಿಕೊಂಡು, ಅಭಿಯಾನದ ಯಶಸ್ಸಿನಲ್ಲಿ ಮಹತ್ವಪೂರ್ಣ ಪಾತ್ರ ವಹಿಸುತ್ತಿರುವ ಕೇದಾರೋತ್ಥಾನ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಮುರಳಿ ಕಡೆಕಾರ್ ಮತ್ತು ಕೋಶಾಧಿಕಾರಿ ಕೆ.ರಾಘವೇಂದ್ರ ಕಿಣಿಯವರ ಕ್ರಿಯಾಶೀಲತೆ, ಬದ್ಧತೆ ಕಾರ್ಯಕರ್ತರಿಗೆ ಪ್ರೇರಣಾದಾಯಕ. ಟ್ರಸ್ಟ್ ಪದಾಧಿಕಾರಿಗಳು, ಸದಸ್ಯರ ಸಹಿತ ಪ್ರಮುಖರು, ಜನಪ್ರತಿನಿಧಿಗಳು, ಸ್ವಯಂ ಸೇವಕರ ಸಮರ್ಪಣಾ ಭಾವದ ಸೇವಾ ತತ್ಪರತೆ ಪ್ರಶಂಸನೀಯ. ಈ ಎಲ್ಲಾ ಬೆಳವಣಿಗೆಗಳಿಂದ ಉಡುಪಿ ಜಿಲ್ಲೆಯಾದ್ಯಂತ ಯುವ ಸಮುದಾಯ ಕೃಷಿಯತ್ತ ಒಲವು ಮೂಡಿಸುತ್ತಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಹಸುರು ಕ್ರಾಂತಿಯ ರೂವಾರಿ ಎನಿಸಿಕೊಂಡಿರುವ ಜನಪ್ರಿಯ ಶಾಸಕ ಕೆ.ರಘುಪತಿ ಭಟ್‌ರವರ ನೇತೃತ್ವದ ತಂಡ ಕೃಷಿ ಕ್ಷೇತ್ರದಲ್ಲಿ ಹೊಸ ಇತಿಹಾಸ ಸೃಷ್ಟಿಸಲಿ ಎಂಬ ಆಶಯ ನಮ್ಮದು.

## ಈ ಕೃಷಿ ಯಜ್ಞದಲ್ಲಿ ನಮ್ಮ ಸಮಾಜ ಬಾಂಧವರು ಕೈಜೋಡಿಸಿದ್ದಾರೆ



ನಮ್ಮ ಸಂಘದ ಅಧ್ಯಕ್ಷರಾದ ಕೆ. ಮಂಜುನಾಥ ಹೆಬ್ಬಾರ್, ಒಳಕಾಡು ವಾರ್ಡಿನ ನಗರಸಭಾ ಸದಸ್ಯೆ ಶ್ರೀಮತಿ ರಜನಿ ಹೆಬ್ಬಾರ್, ಸಂಘದ ಪ್ರಭಾರ ಕಾರ್ಯದರ್ಶಿ ಪ್ರಭಾಕರ ಭಂಡಿ ಮತ್ತು ಅನೇಕ ಕಾರ್ಯಕರ್ತರು ನಗರ ಪ್ರದೇಶವಾದ ಬೀಡಿನಗುಡ್ಡೆಯಿಂದ ಶಾರದಾ ಮಂಟಪ ರಸ್ತೆಯ ಇಕ್ಕೆಲಗಳಲ್ಲಿ ಇರುವ 10 ಎಕರೆ ಗದ್ದೆಯನ್ನು ಸ್ವತ: ಗದ್ದೆಗಿಳಿದು ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ. ಇದರಿಂದ ಪ್ರೇರಿತರಾದ ನಮ್ಮ ಪ್ರಭಾರ ಕಾರ್ಯದರ್ಶಿ ಪ್ರಭಾಕರ ಭಂಡಿಯವರು ತಮ್ಮ ಹಿರಿಯರ ಗದ್ದೆಯನ್ನು ತಮ್ಮ ಚಿಕ್ಕಪ್ಪಂದಿರು ಹಾಗೂ ಸಹೋದರರ ಆರ್ಥಿಕ ಸಹಕಾರದೊಂದಿಗೆ ರೋಟರಿ ವಲಯ ಕೃಷಿ ಸಾಕ್ಷರತಾ ಕಾರ್ಯಕ್ರಮವಾಗಿ ಸುಮಾರು 5 ಎಕರೆ ಹಡಿಲು ಗದ್ದೆಯನ್ನು ನಾಟಿ ಮಾಡಿರುತ್ತಾರೆ. ಅದೂ ಅದಲ್ಲದೆ ಟ್ರಸ್ಟಿನ ಒಂದೆರಡು ಸಭೆಗಳನ್ನು ಕೂಡ ಶಾಸಕರ ವಿನಂತಿ ಮೇರೆಗೆ ನಮ್ಮ ಸಭಾಂಗಣದಲ್ಲಿ ಆಡಳಿತ ಮಂಡಳಿ ಒಪ್ಪಿಗೆಯಂತೆ ನಡೆಸಿದ್ದೇವೆ.

ಮತ್ತೊಂದು ವಿಶೇಷ ಎಂದರೆ ಈ ಕಾರ್ಯಕ್ರಮದಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೆ ಅಲ್ಪ ಸ್ವಲ್ಪ ತಮ್ಮ ಕೈಯಿಂದಲೇ ಖರ್ಚು ಮಾಡಿ ಈ ಕಾಯಕದಲ್ಲಿ ನಿರತರಾಗಿದ್ದಾರೆ. ಮುಂದಿನ ದಿನಗಳಲ್ಲಿ ಯುವ ಪೀಳಿಗೆಗೆ ಪ್ರೇರಣೆಯಾಗಲೀ ಎಂಬುದೇ ನಮ್ಮ ಆಶಯ.



ಭಂಡಿ ಕುಟುಂಬದವರ ಸಹಕಾರದೊಂದಿಗೆ ರೋಟರಿ ಕೃಷಿ ಸಾಕ್ಷರತಾ ಕಾರ್ಯಕ್ರಮ ಉದ್ಘಾಟನೆ




ತಾ.09.08.2021ರಂದು ಬೆಳಿಗ್ಗೆ ಬಾರಕೂರಿನ ಶ್ರೀ ಮಹತೋಭಾರ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ ಬ್ರಹ್ಮಾವರ ತಾಲೂಕು ಇದರ ವತಿಯಿಂದ ನಡೆಯುವ "ಶಿವ ಪಂಚಾಕ್ಷರಿ ಜಪ ಯಜ್ಞ" ದ ಸಂಕಲ್ಪ ಪ್ರಾರ್ಥನೆ ಮಾಡಲಾಯಿತು.

## ಚಿಣ್ಣರ ಅಂಗಳ







ನಮಿತ್
ಶ್ರೀ ಪ್ರಶಾಂತ್ ಹಾಗೂ ಶ್ರೀಮತಿ ರಶ್ಮಿರವರ ಪುತ್ರ




Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org